# ಆಹಾ ಸುದ್ದಿ!

★ ಸಸಿತೋಟ



ಫ್ಲಾರಿಡಾದಲ್ಲಿರುವ ನ್ಯಾಷನಲ್ ಮರ್ರೈನ್ ಸ್ಯಾಂಕ್ಚುವರಿಯಲ್ಲಿ ನೀರಿನೊಳಗೆ ಒಂದಿಷ್ಟು ಮಂದಿ ಮುಳುಗಿಕೊಂಡು ವಾದ್ಯ ಗೋಷ್ಠಿ ನಡೆಸಿದರು. ಆದರೆ ಹಕೀಕತ್ತು ಬೇರೆಯೇ ಇತ್ತು. ಹೊರಗಡೆಯಿಂದ ಸಂಗೀತ ತೇಲಿಕೊಂಡು ನೀರಿನೊಳಗಿರುವ ಸ್ಪೀಕರ್‌ಗಳಿಂದ ಹೊರಹೊಮ್ಮುತ್ತಿತ್ತಂತೆ. ವಾದ್ಯ ಪರಿಕರಗಳನ್ನು ಹಿಡಿದವರು ನುಡಿಸಿದಂತೆ ನಟಿಸುತ್ತಿದ್ದರು. ನಟಿಸಲು ಇಷ್ಟೆಲ್ಲಾ ಕಷ್ಟಪಡಬೇಕೆ?

ಫ್ಲಾರಿಡಾದ ಮೀನುಗಾರ ಟಾಮ್ ಎಂಬಾತ ಸರಸೋಟದಲ್ಲಿ ಮೀನು ಹಿಡಿಯುತ್ತಿದ್ದ. ಆತನ ಗಾಳವನ್ನು ಬಲವಾಗಿ ಎಳೆಯುತ್ತಿದ್ದ ಮೀನೊಂದನ್ನು ಕಷ್ಟಪಟ್ಟು ಮೇಲೆಳೆದಾಗ ವಿಚಿತ್ರ ಮೀನನ್ನು ಕಂಡು ಅದರ ಫೋಟೊ ತೆಗೆದು ಹಾಗೆಯೇ ವಾಪಸ್ಸು ಬಿಟ್ಟುಬಿಟ್ಟನಂತೆ. ಫೋಟೊ ನೋಡಿದ ತಜ್ಞರು ಟಾಮ್‌ನ 'ಸಿಂಗಲ್ ಪೀಸ್' ಅವನಲ್ಲೇ ಸುರಕ್ಷಿತವಾಗಿ ಉಳಿದಿದ್ದಕ್ಕೆ ಶುಭಾಶಯ ಕೋರಿದರಂತೆ. ಅಷ್ಟಕ್ಕೂ ಈ ಮೀನು ನೀರಿಗಿಳಿದ ಪುರುಷರ ಜನನಾಂಗ ತಿನ್ನುವ ಚಾಳಿಯ ಮೀನಂತೆ.




ಲಂಡನ್ನಿನ ಸೋಹೋದಲ್ಲಿ ಬಾರ್ ಪರಿಚಾರಕರಿಗಾಗಿ ಸ್ಪರ್ಧೆ ನಡೆಯಿತು. ಪ್ಲೇಟಿನ ಮೇಲೆ ಮದ್ಯದ ಬಾಟಲ್ ಇಟ್ಟುಕೊಂಡು ರಸ್ತೆಯಲ್ಲಿ ಓಡುವುದು. ಬಾಟಲ್ ಒಳಗಿರುವುದನ್ನು ಹೊಟ್ಟೆಗಿಳಿಸಿ ಓಡಿದ್ದರೆ ಓಟಕ್ಕೆ ಇನ್ನಷ್ಟು ಮತ್ತು, ಮಜಾ ಬರುತ್ತಿತ್ತು.

ಸಂಪ್ರದಾಯವಾದಿಗಳ ದೇಶ ಎಂದು ಹಣೆಪಟ್ಟಿ ಕಟ್ಟಿಕೊಂಡಿರುವ ಇಂಗ್ಲೆಂಡ್‌ನ ಲಂಡನ್ನಿನಲ್ಲಿ ಚಿತ್ರವಿಚಿತ್ರವಾದ ಹೆಸರುಗಳ ಬೀದಿಗಳು ಪ್ರವಾಸಿಗರನ್ನು ಕಕ್ಕಾಬಿಕ್ಕಿಗೊಳಿಸುತ್ತಿವೆ. 'ಆರ್ಗ್ಯುಮೆಂಟ್ಸ್ ಯಾರ್ಡ್', 'ಅಪ್ಪರ್ ಬಟ್ಸ್', 'ಬ್ರೇಕ್‌ನೆಕ್ ಲೇನ್', 'ಆಲ್ ಅಲೋನ್', 'ಕಾಮಿಕ್ ಕಾರ್ನರ್'.... ಸುಲಭವಾಗಿ ನಗದೆ 'ಸ್ಟಿಫ್ ಅಪ್ಪರ್ ಲಿಪ್' ಎಂದು ಹೆಸರು ಪಡೆದಿರುವ ಬ್ರಿಟಿಷರ ಮಧ್ಯೆ ಈ ತಮಾಷೆ ಹೆಸರುಗಳನ್ನು ಓದಿ ಪ್ರವಾಸಿಗರು ನಗಬೇಕಷ್ಟೆ.



ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿ ಮುಗಿದರೂ ಫುಟ್‌ಬಾಲ್ ಜ್ವರ ಇನ್ನೂ ಕಡಿಮೆಯಾದಂತಿಲ್ಲ. ಬೀಜಿಂಗ್‌ನಲ್ಲಿ ಪ್ಲಾಸ್ಟಿಕ್ ಗುಳ್ಳೆಯೊಳಗೆ ತೂರಿಕೊಂಡ ಆಟಗಾರರು ಕಾಲ್ಚೆಂಡು ಆಡಿದರು. ಗುಳ್ಳೆ ಉರುಳಿದಾಗ ಕಾಲುಗಳನ್ನು ಗಾಳಿಯಲ್ಲಿ ಆಡಿಸುತ್ತ ಆಡುವ ಈ ಪರಿ ನೀರಿಲ್ಲದ ಕೊಳದಲ್ಲಿ ಈಜು ಕಲಿತಂತೆಯೇ!



ಫ್ರೆಂಚ್ ಪಾಲಿನೇಶಿಯನ್ ದ್ವೀಪವಾದ ತಾಹಿತಿಯಲ್ಲಿ ಇತ್ತೀಚೆಗೆ ಅಲ್ಲಿಯ ಮೂಲನಿವಾಸಿಗಳ ಮಧ್ಯೆ ಕ್ರೀಡಾ ಸ್ಪರ್ಧೆಗಳು ನಡೆದವು. ಬರಿಗೈಲಿ ತೆಂಗಿನ ಮರ ಹತ್ತುವ ಸ್ಪರ್ಧೆ, ತೆಂಗಿನ ಕಾಯನ್ನು ಸುಲಿಯುವ ಸ್ಪರ್ಧೆ ಮೊದಲಾದವು ನಡೆದವು. ಗೆದ್ದವರಿಗೆ ಬಹುಮಾನ ಏನಿರಬಹುದು? ತಲಾ ಎರಡು ತೆಂಗಿನ ಕಾಯಿಗಳು! ಫುಟ್‌ಬಾಲ್ ವಿಜೇತರಿಗೆ ನೂರಾರು ಕೋಟಿ ಡಾಲರ್ ಬಹುಮಾನದ ಬದಲು ಒಂದೋ, ಎರಡೋ ಫುಟ್‌ಬಾಲ್ ನೀಡಿದ್ದರೆ....! ಫುಟ್ಬಾಲ್ ಕ್ರೀಡೆಯಲ್ಲಿ ರೋಚಕತೆಯೇ ಇರುತ್ತಿರಲಿಲ್ಲವೇನೋ!